ವಿ. ಹಮೀದ್, ವಿಟ್ಲ
ಇರುವೆಗಳಲ್ಲಿರುವ ಶಿಸ್ತು ಮನುಷ್ಯನಲ್ಲಿ ಕಾಣಬರುವುದು ಯಾವಾಗ?



ಮನುಷ್ಯನಲ್ಲಿದೆ; ಭಾರತೀಯನಲ್ಲಿ ಅವನು ಅನಿವಾಸಿಯಾದಾಗ.

ಶ್ರುತಿ ರಿಗ್ರೆಟ್ ಐಯ್ಯರ್, ಬೆಂಗಳೂರು
ಶಿವ ಸರಳ; ವಿಷ್ಣು ಅಲಂಕಾರಿ. ಏಕೆ ಹೀಗೆ?
ವಿಷ್ಣುವಿಗೆ ರತ್ನಗರ್ಭನಾದ ಮಾವ, ಅನ್‌ಲಿಮಿಟೆಡ್ ಫಂಡ್ಸ್ ಉಳ್ಳ ಸತಿ ಇದ್ದಾರೆ.

ಎಸ್.ಸಿ. ರಮೇಶ್, ಮೈಸೂರು
ಕ್ಷಣದಲ್ಲಿ ಹೇಳಬಹುದಾದ ಸುದ್ದಿಯನ್ನು ಐದಾರು ನಿಮಿಷಕ್ಕೆ ಎಳೆಯುವ ಟಿ.ವಿ. ಆ್ಯಂಕರ್‌ಗಳಿಗೇಕೆ ಈ ಹುಚ್ಚುತನ?
ತಪ್ಪು ಅವರದಲ್ಲ; ಸಹಿಸುವ ಹುಚ್ಚರಿರುವವರೆಗೆ ಕಾಡುವ ಹುಚ್ಚರು ಇದ್ದೇ ಇರುತ್ತಾರೆ.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ
ಇರುಳು ಕಂಡ ಬಾವಿಯಲ್ಲಿ ಹಗಲು ಬೀಳುವುದು ಎಂದರೇನು ಸರ್?



ಕೊರೊನಾ ಸೋಂಕಿತ ಎಂದು ತಿಳಿದಿದ್ದೂ ಕೈ ಕುಲುಕುವುದು.

ನಾರಾಯಣ ಯಾಜಿ, ಶಿರಾಲಿ
ಈಗ ಸಹ 'ಮಹಾತ್ಮ ಗಾಂಧೀ ಕೀ ಜೈ' ಅನ್ನೋದು ಎಷ್ಟು ಸರಿ?
ಗಾಂಧಿ ಎಲ್ಲ ನೋಟುಗಳಲ್ಲಿದ್ದಾರಲ್ಲಾ! ಇವರ ಜೈಕಾರ ಆ 'ಗಾಂಧಿ'ಗೆ.

ಕೆ.ವಿ. ಗೋವಿಂದಾಚಾರಿ, ಮೈಸೂರು
ವಿದ್ಯಾವಂತರೇ ಹೆಚ್ಚಾಗಿ ಸಂಚಾರಿ ನಿಯಮ ಉಲ್ಲಂಘಿಸಿ ದಂಡ ಕಟ್ಟುವರಲ್ಲಾ, ಏಕೆ?
ವಿದ್ಯೆ ಇವರಿಗೆ ನುಗ್ಗುವುದನ್ನು ಕಲಿಸಿತೇ ವಿನಹ ತಗ್ಗುವುದನ್ನು ಕಲಿಸಿಲ್ಲವಾದ್ದರಿಂದ.

ಎ.ಕೆ. ಪಟ್ಟಾಭಿ, ಬೆಂಗಳೂರು
ಸೆಪ್ಟೆಂಬರ್ 30 ಸೇಫ್ಟಿಪಿನ್ ಡೇ; ರಿವಾಲ್ವರ್ ಡೇ ಯಾವತ್ತು?
'ರಿವಾಲ್ವಿಂಗ್ ಚೇರ್'ನಲ್ಲಿ ಕುಳಿತು ಕೆಲಸ ಮಾಡುವವರಿಗಂತೂ ದಿನವೂ ರಿವಾಲ್ವರ್ ಡೇ!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಅಭಿಮನ್ಯು ಚಕ್ರವ್ಯೂಹಕ್ಕೂ, ರಾಜಕೀಯ ಚಕ್ರವ್ಯೂಹಕ್ಕೂ ಏನು ವ್ಯತ್ಯಾಸ?
ಅಲ್ಲಿ ಶೌರ್ಯ ಪ್ರಧಾನ; ಇಲ್ಲಿ ಚೌರ್ಯ ಪ್ರಧಾನ.

ದಿನೇಶ್, ಗುಡ್ಡದೂರು
ಮದ್ಯವನ್ನು ಎಣ್ಣೆ ಎಂದು ಕರೆಯಲು ಕಾರಣವೇನು ರಾಮ್?
ನೋಡೆ = ನೋಡಲಾರೆ; ಎಣ್ಣೆ = ಎಣಿಸಲಾರೆ; ವ್ಯಕ್ತಿಯ ಲೆಕ್ಕಾಚಾರ ತಪ್ಪಿಸುವ ಮದ್ಯವೇ ಎಣ್ಣೆ.

ಜಿ.ಆರ್. ಆದಿನಾರಾಯಣಮುನಿ, ಬೆಂಗಳೂರು
ಸ್ವಾಮಿಗಳನ್ನು ಕೆಲವರು ಬುದ್ದಿಯೋರು ಎಂದು ಕರೆಯುವರಲ್ಲಾ, ಉಳಿದವರೆಲ್ಲಾ ದಡ್ಡರಾ?
ಸ್ವಾಮಿಗಳು ಧರ್ಮದ ಬೆಳಕನ್ನು ಚೆಲ್ಲುವ ಬುಡ್ಡಿ; ಬುಧ್ಯೋರು ಪದವು 'ಬುಡ್ಯೋರು' ಪದದ ತದ್ಭವ.

ಮುಕುಂದ ಹೆರಕಲ್ಲ, ಬೆಂಗಳೂರು
ಜಾತ್ಯತೀತರಾಗಿರಲು ಬಯಸುವ ಕೆಲವು ಮಠಾಧಿಪತಿಗಳು ಸ್ವಜಾತಿ ಬಾಂಧವರಿಗೆ ಮಣೆ ಹಾಕುವುದೇಕೆ?
ಅವರಿಗೆ ಮಣೆ ಹಾಕದಿದ್ದರೆ ಇವರ ಪೀಠದ ಕಾಲೆಳೆಯುವುದರಿಂದ.

ವ. ಉಮೇಶ ಕಾರಂತ, ಮಂಗಳೂರು
ಕೈಬರವಣಿಗೆಗೆ ಇನ್ನೆಷ್ಟು ಕಾಲ?
ಫ್ಯಾನ್ಸ್, ಲವರ್ಸ್ 'ಇಷ್ಟದೇವತೆ'ಗಳ ಹೆಸರನ್ನು ಡೆಸ್ಕ್, ಬೆಂಡೆ, ಮರಗಳಲ್ಲಿ ಗೀಚುವವರೆಗೆ ಕೈಬರಹ ಅಮರ.

ನರಸಿಂಹ ಪೈ, ಕಾಸರಕೋಡ
ಪ್ಲಾಸ್ಟಿಕ್ ಎಂಬ ರಕ್ಕಸನ ಕೊನೆ ಎಂದು?
ಪರಿಸರಕ್ಕೆ ಪ್ರತಿಕೂಲವಾದುದು ತನ್ನನುಕೂಲಕ್ಕೆ ಬೇಡವೇ ಬೇಡವೆಂದು ನರ ನಿರ್ಧರಿಸಿದಂದು.

## ಬಹುಮಾನಿತ ಪ್ರಶ್ನೆ

ಟಿ.ಎಂ. ಮಾನಪ್ಪ, ಶಿವಮೊಗ್ಗ
ಕೋಳಿಯನ್ನು ಕೆಜಿಯಲ್ಲಿ ಮಾರುತ್ತಾರೆ. ಮೊಟ್ಟೆಯನ್ನು ಏಕೆ ಹಾಗೆ ಮಾರುವುದಿಲ್ಲ?
ಮೊಟ್ಟೆ ಇನ್ನೂ ಕೆ.ಜಿ.ಗೆ ಸೇರುವಷ್ಟು ಬೆಳೆದಿಲ್ಲ. ಅದು ಪ್ರಿನರ್ಸರಿ.

ಕೊಟ್ಟೂರು ಜವಳಿ ಜಯ್ಯಣ್ಣ, ದಾವಣಗೆರೆ
ಖಾಕಿ ಖಾದಿಗೆ ಅಧೀನ; ಖಾದಿ ಕಾವಿಗೆ ಅಧೀನ. ಹಾಗಾದರೆ ಕಾವಿ ಯಾರಿಗೆ ಅಧೀನ?
ಮಾರ್ಜಾಲಾಶ್ರಮಗಳಲ್ಲಂತೂ ದೇಹದ ಕಾವಿಗೆ ಅಧೀನ.

ಅಮರಯ್ಯಾ ಪತ್ರಿಮಠ, ಸುರಪುರ
ಆಟಕ್ಕುಂಟು, ಲೆಕ್ಕಕ್ಕಿಲ್ಲ. ಏನದು?
ಗಿಂಬಳಕ್ಕೆ ಹೋಲಿಸಿದರೆ ಮಂತ್ರಿಗಳ ಸಂಬಳ.

ಕಾವ್ಯಶ್ರೀ ಪತ್ರಿಮಠ, ಸುರಪುರ
'ಬಿರುದು'ಗಳ ಜೊತೆ 'ಬಾವಲಿ' ಏಕೆ?



ಬಿರುದು ಪಡೆದ ಅನೇಕರು ಅಹಂಕಾರದಿಂದ ಬಾವಲಿಗಳಷ್ಟೇ ಕುರುಡಾಗುವುದರಿಂದ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
ದೇವರ ಪಟಕ್ಕೆ ಹಾಕುವಂತೆ ಮೃತರ ಚಿತ್ರಕ್ಕೂ ಹಾರ ಹಾಕುವರಲ್ಲ, ಹಾಗಾದರೆ ಮೃತರು ದೇವರಾಗಲು ಸಾಧ್ಯವೆ?
ರೆಸ್ಪಾಂಡಿಂಗು, ಕರೆಸ್ಪಾಂಡಿಂಗು ಇಲ್ಲದಿರುವ ವಿಷಯದಲ್ಲಂತೂ ದೇವರೇ.

ಬಿ. ಚಂದ್ರೇಗೌಡ, ಬೆಂಗಳೂರು
ಯಮಪಾಶಕ್ಕೂ, ಪ್ರೇಮಪಾಶಕ್ಕೂ ಏನು ವ್ಯತ್ಯಾಸ?
ಪ್ರೇಮಪಾಶ ಕುಣಿಯಲು ತೊಡಗಿಸುತ್ತದೆ; ಯಮಪಾಶ ಕುಣಿಯಲು ತೊಡಗಿಸುತ್ತದೆ.

ವಿ. ಜಯವಂತ ಪೈ, ಕುಂದಾಪುರ
ಕರ್ನಾಟಕದಲ್ಲಿ ಭಿಕ್ಷುಕರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆಯಂತಲ್ಲಾ...?
ಹೌದು. ರಾಜಕೀಯ ಟಿಕೆಟ್ ಬೇಡುವ ಭಿಕ್ಷುಕರ ಕ್ಯೂ ಬೆಳೆಯುತ್ತಿದೆ. ■ ರಾಮ್